# ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 56 ಪಪಾಯೋ 2015

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 04.09.2015.

## ತಿದ್ದುಪಡಿ ಆದೇಶ

ಆದೇಶ ಸಂಖ್ಯೆ: ಪಸಂಮೀ 56 ಪಪಾಯೋ 2015, ದಿನಾಂಕ 23.05.2015ರ ಆದೇಶದೊಂದಿಗೆ ಲಗತ್ತಿಸಿರುವ ಕ್ರಿಯಾ ಯೋಜನೆಗಳ ಸಂಕ್ಷಿಪ್ತ ವಿವರಗಳಲ್ಲಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಗೆ ಸಂಬಂಧಿಸಿದ ಕ್ರಮ ಸಂಖ್ಯೆ: (1) ಮತ್ತು (2)ರ ಬದಲಾಗಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಂತೆ ತಿದ್ದುಪಡಿ ಮಾಡಲಾಗಿದ್ದು, ಅದರಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Sudarshan Kumar 4/9/15

(ಡಿ.ಎಸ್. ಸುದರ್ಶನ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
[ಪಶುಸಂಗೋಪನೆ]

04/9/15

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ಯೋಜನಾ ಇಲಾಖೆ / ಸಮಾಜ ಕಲ್ಯಾಣ ಇಲಾಖೆ.
3) ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4) ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
5) ಕುಲಪತಿಗಳು, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ್.
6) ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು.
7) ನಿರ್ದೇಶಕರು, ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು.
8) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ, ಕ್ವೀನ್ಸ್ ರಸ್ತೆ, ದಂಡು ಪ್ರದೇಶ, ಪಶು ಆಸ್ಪತ್ರೆ ಆವರಣ, ಬೆಂಗಳೂರು.
9) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಹೆಬ್ಬಾಳ, ಬೆಂಗಳೂರು.
10) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
11) ವಾರದ ರಾಜ್ಯ ಪತ್ರ / ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ತಿದ್ದುಪಡಿ ಆದೇಶ ಸಂಖ್ಯೆ: ಪಸಂಮೀ/56/ಪಪಾಯೋ/2015, ದಿನಾಂಕ 04.09.2015ರ ಅನುಬಂಧ**

**ಪಶುಸಂಗೋಪನೆ ಇಲಾಖೆಗೆ ಸಂಬಂಧಿಸಿದಂತೆ 2015-16ನೇ ಸಾಲಿನ ಯೋಜನಾ ಲೆಕ್ಕಶೀರ್ಷಿಕೆಗಳಿಗೆ ಕ್ರಿಯಾ ಯೋಜನೆಗಳ ಸಂಕ್ಷಿಪ್ತ ವಿವರಗಳು**

IV] ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ :

| ಕ್ರ. ಸಂ. | ಲೆಕ್ಕಶೀರ್ಷಿಕೆ | Object Code | 2015-16ನೇ ಸಾಲಿನಲ್ಲಿ ಒದಗಿಸಿರುವ ಅನುದಾನ (₹ ಲಕ್ಷಗಳಲ್ಲಿ) | ಅನುಮೋದಿತ ಕಾರ್ಯಕ್ರಮಗಳು |
|---|---|---|---|---|
| 1. | 2403-00-104-0-02 | 101-Grant-in-aid | 775.00 | 1) ಕುರಿ ಸಂವರ್ಧನಾ ಕೇಂದ್ರಗಳ ನಿರ್ವಹಣೆ (₹237.00 ಲಕ್ಷಗಳು)<br>2) ಕುರಿ/ಮೇಕೆಗಳ ಆರೋಗ್ಯ ರಕ್ಷಣೆ (ಜಂತುನಾಶಕ ಔಷಧಿ ಮತ್ತು ಜೀವಸತ್ವಯುಕ್ತ ಲವಣ ಮಿಶ್ರಣ ಪೂರೈಕೆ) (₹365.00 ಲಕ್ಷಗಳು)<br>3) ನಿಗಮದ ಜಿಲ್ಲಾ ಕಛೇರಿಗಳ ಕೊಠಡಿಗಳನ್ನು ದುರಸ್ತಿಗೊಳಿಸುವುದು (₹95.00 ಲಕ್ಷಗಳು)<br>4) ಸಹಾಯಧನ ಯೋಜನೆಯಡಿ ತಳಿ ಅಭಿವೃದ್ಧಿಗಾಗಿ ಮಿಶ್ರತಳಿ ಟಗರುಗಳು/ಸುಧಾರಿತ ತಳಿ ಹೋತಗಳ ಪೂರೈಕೆ (₹7.50 ಲಕ್ಷಗಳು)<br>5) ಉಣ್ಣೆ ವಸ್ತುಗಳ ತಯಾರಿಕೆ ಕುರಿತು ತರಬೇತಿ ಕಾರ್ಯಕ್ರಮ (₹4.00 ಲಕ್ಷಗಳು)<br>6) ಕುರಿ/ಮೇಕೆ ಸಾಕಾಣಿಕೆ ತರಬೇತಿ ಮತ್ತು ಯಾಂತ್ರೀಕೃತ ಉಣ್ಣೆ ಕಟಾವಣೆ ತರಬೇತಿ ಕಾರ್ಯಕ್ರಮ (₹2.00 ಲಕ್ಷಗಳು)<br>7) ನಿಗಮದ ಕಾರ್ಯಚಟುವಟಿಕೆಗಳ ಕುರಿತು ಪ್ರಚಾರ ಹಾಗೂ ಕಿರುಹೊತ್ತಿಗೆ ಮುದ್ರಣ (₹20.00 ಲಕ್ಷಗಳು)<br>8) ವಿಚಾರ ಸಂಕಿರಣ, ಪ್ರದರ್ಶನ, ತರಬೇತಿ ಹಾಗೂ ಪ್ರವಾಸ ಕಾರ್ಯಕ್ರಮಗಳು (₹12.00 ಲಕ್ಷಗಳು)<br>9) ಕುರಿ ಸಂವರ್ಧನ ಮತ್ತು ತರಬೇತಿ ಕೇಂದ್ರಗಳಲ್ಲಿ ಕುರಿಗಾರರಿಗೆ ತರಬೇತಿ ನೀಡುವ ಕಾರ್ಯಕ್ರಮ (₹7.50 ಲಕ್ಷಗಳು)<br>10) ಭೇಡ್ ಪಾಲಕ್ ಭೀಮ ಯೋಜನೆಯಡಿ ಕುರಿಗಾರರಿಗೆ ವಿಮಾ ರಕ್ಷೆ ಒದಗಿಸುವುದು (₹25.00 ಲಕ್ಷಗಳು) |

<table>
<tr><td></td><td></td><td>422-Schedule Caste Sub Plan</td><td>150.00</td><td rowspan="2">ನಿಗಮದಲ್ಲಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಹಿಳಾ/ಪುರುಷ ಸದಸ್ಯರುಗಳಿಗೆ ಹಾಗೂ ಸಂಘಗಳು ಇಲ್ಲದಿರುವ ಪ್ರದೇಶಗಳಲ್ಲಿ ಆಸಕ್ತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಕುರಿ / ಮೇಕೆ (10 + 1) ಘಟಕಗಳನ್ನು ಒದಗಿಸುವುದು. ಘಟಕದ ವೆಚ್ಚದ ಶೇ.50ರಷ್ಟನ್ನು ಸಹಾಯಧನವಾಗಿ ಹಾಗೂ ಉಳಿದ ಶೇ.50ರಷ್ಟನ್ನು ಸಾಲದ ರೂಪದಲ್ಲಿ ಬ್ಯಾಂಕ್ ವತಿಯಿಂದ ಒದಗಿಸುವುದು. ಘಟಕ ವೆಚ್ಚವನ್ನು ಈ ಕೆಳಕಂಡಂತೆ ನಿಗದಿಪಡಿಸಿದೆ:
<table>
<tr><th>ಘಟಕ</th><th>(10 + 1) ಘಟಕದ ವೆಚ್ಚ</th><th>ಸಹಾಯಧನ (50%)</th></tr>
<tr><td>ಕುರಿ ಘಟಕ</td><td>₹52,000/-</td><td>₹26,000/-</td></tr>
<tr><td>ಮೇಕೆ ಘಟಕ</td><td>₹49,000/-</td><td>₹24,500/-</td></tr>
</table></td></tr>
<tr><td></td><td></td><td>423-Tribal Sub Plan</td><td>75.00</td></tr>
<tr><td>2.</td><td>2403-00-104-0-12</td><td>101-Grant-in-aid</td><td>500.00</td><td>ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ, ಇನ್ನಿತರೆ ಸಂದರ್ಭಗಳಲ್ಲಿ ಆರು ತಿಂಗಳ ಮೇಲ್ಪಟ್ಟ ಕುರಿ/ಮೇಕೆಗಳು ಆಕಸ್ಮಿಕ ಮರಣ ಹೊಂದಿದಲ್ಲಿ ಹಾಗೂ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಪ್ರತಿ ಕುರಿ/ಮೇಕೆಗಳಿಗೆ ₹5,000/-ಗಳ ಪರಿಹಾರ ಧನ (exgratia) ನೀಡುವುದು.</td></tr>
<tr><td></td><td></td><td>422-Schedule Caste Sub Plan</td><td>75.00</td><td rowspan="2">ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ, ಇನ್ನಿತರೆ ಸಂದರ್ಭಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುರಿಗಾರರ ಆರು ತಿಂಗಳ ಮೇಲ್ಪಟ್ಟ ಕುರಿ/ ಮೇಕೆಗಳು ಆಕಸ್ಮಿಕ ಮರಣ ಹೊಂದಿದಲ್ಲಿ ಹಾಗೂ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಪ್ರತಿ ಕುರಿ/ಮೇಕೆಗಳಿಗೆ ₹5,000/-ಗಳ ಪರಿಹಾರ ಧನ (exgratia) ನೀಡುವುದು.</td></tr>
<tr><td></td><td></td><td>423-Tribal Sub Plan</td><td>25.00</td></tr>
</table>

(ಡಿ.ಎಸ್. ಸುದರ್ಶನ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
[ಪಶುಸಂಗೋಪನೆ]